**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 17-08-2024.**

**ಪಾಟೀ ಸವಾಲು - 1 ಮತ್ತು 4 ನೇ ಪ್ರತಿವಾದಿಗಳ ಪರ ವಕೀಲರಿಂದ :**

**1)** ಚಿಕ್ಕತಾಯಪ್ಪ ಅವರಿಗೆ ಒಟ್ಟು ಐದು ಜನ ಮಕ್ಕಳು. ಮೂರು ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ನಿ.ಪಿ.1 ರಲ್ಲಿ ಚಿಕ್ಕತಾಯಪ್ಪ ಅವರಿಗೆ ಒಟ್ಟು ಎಷ್ಟು ಜನ ಮಕ್ಕಳು ಮತ್ತು ಅವರ ಮಕ್ಕಳಲ್ಲಿ ನನಗೆ ಒಬ್ಬನಿಗೆ ಮಾತ್ರ ಏಕೆ ಅಧಿಕಾರ ಪತ್ರವನ್ನು ನೀಡಿದ್ದಾರೆ ಎಂದು ನಮೂದಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಚಿಕ್ಕತಾಯಪ್ಪ ಅವರಿಗೆ ಎರಡನೇ ಮಗ. ಆ ಬಗ್ಗೆ ನಿ.ಪಿ. 1 ರಲ್ಲಿ ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.1 ನ್ನು ನಮ್ಮ ತಂದೆ ಮಾಡಿಸಿಕೊಟ್ಟಿರುತ್ತಾರೆ. ಎಲ್ಲಿ ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅದನ್ನು ಮಾಡುವ ಸಮಯದಲ್ಲಿ ನಾನು ಹಾಜರಿರಲಿಲ್ಲ. ನಿ.ಪಿ.1 ನ್ನು ಮಾಡಿಕೊಡುವ ಸಮಯದಲ್ಲಿ ನಮ್ಮ ತಂದೆ ಆರೋಗ್ಯವಂತರಾಗಿದ್ದರು ಹಾಗೂ ನಡೆದಾಡಿಕೊಂಡು ಚೆನ್ನಾಗಿದ್ದರು ಎಂದರೆ ಸರಿ. ಅವರು ಈಗಲೂ ಸಹ ಚೆನ್ನಾಗಿದ್ದಾರೆ ಎಂದರೆ ಕೊರೋನಾ ಬಂದಾಗಿನಿಂದ ಕೈ ಕಾಲು ನಡುಕ ಬರುತ್ತಿದೆ ಎಂದು ನುಡಿಯುತ್ತೇನೆ. ನಿ.ಪಿ.1 ನ್ನು ಯಾವ ಸಮಯದಲ್ಲಿ ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.1 ನ್ನು ನಾನು ಸ್ವತಃ ಸೃಷ್ಟಿ ಮಾಡಿಸಿ ಹಾಜರುಪಡಿಸಿರುತ್ತೇನ ಎಂದರೆ ಸರಿಯಲ್ಲ. ನಾನು ಸದರಿ ಅಧಿಕಾರ ಪತ್ರಕ್ಕೆ ಸಹಿ ಮಾಡಿರುವುದಿಲ್ಲ.

**2)** ನಿ.ಪಿ.2 ನ್ನು ನಮ್ಮ ತಂದೆ ಮಾಡಿಸಿರುತ್ತಾರೆ. ದೇವನಹಳ್ಳಿಯಲ್ಲಿ ಮಾಡಿಸಿರುತ್ತಾರೆ. ನಿ.ಪಿ.2 ನ್ನು ಮಾಡಿಸುವಾಗ ನಮ್ಮ ತಂದೆ ಸ್ವಲ್ಪ ಮಟ್ಟಿಗೆ ಆರೋಗ್ಯವಂತರಾಗಿದ್ದರು. ನಿ.ಪಿ. 2 ನ್ನು ತಯಾರಿಸಲು ನಮ್ಮ ತಂದೆ ಮಾಹಿತಿ ನೀಡಿರುತ್ತಾರೆ. ನಿ.ಪಿ2 ರಲ್ಲಿ ಚಿಕ್ಕ ಓಬಯ್ಯ ಅವರ ಕುಟುಂಬದ ಸದಸ್ಯರ ಸಂಪೂರ್ಣ

ಮಾಹಿತಿ ಇಲ್ಲ ಎಂದರೆ ಸರಿ. ಗಂಡು ಮಕ್ಕಳ ಬಗ್ಗೆ ಮಾತ್ರ ಮಾಹಿತಿ ಇದೆ, ಹೆಣ್ಣು ಮಕ್ಕಳ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತೇನೆ. ಚಿಕ್ಕ ಓಬಯ್ಯ ಮತ್ತು ಲಗುಮಕ್ಕ ಅವರಿಗೆ ನಾಲ್ಕು ಜನ ಗಂಡು ಮ್ಕಕಳು ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು ಎಂದರೆ ಸರಿ. ನಿ.ಪಿ.2 ರಲ್ಲಿ ಬಿಟ್ಟು ಹೋಗಿರುವ ಹೆಣ್ಣು ಮಕ್ಕಳ ಹೆಸರು ಮುನಿಅಕ್ಕಯಮ್ಮ, ನಾರಾಯಣಮ್ಮ, ಚಿಕ್ಕಮುನಿಯಮ್ಮ ಮತ್ತು ಮುನಿರತ್ನಮ್ಮ ಆಗಿರುತ್ತದೆ. ಸದರಿ ನಾಲ್ಕೂ ಜನ ಈಗ ಜೀವಂತವಾಗಿರುತ್ತಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ಯಾವ ಕಾರಣಕ್ಕಾಗಿ ನಿ.ಪಿ.2 ರಲ್ಲಿ ಮತ್ತು ಈ ದಾವೆಯಲ್ಲಿ ಅವರನ್ನು ಪಕ್ಷಕಾರರನ್ನಾಗಿ ಸೇರಿಸಿರುವುದಿಲ್ಲ ಎನ್ನುವುದನ್ನು ತಿಳಿದುಕೊಂಡಿರುತ್ತೇನೆ. ಈ ದಾವೆ ದಾಖಲಿಸಲು ನನಗೆ ನಮ್ಮ ತಂದೆ ಮಾಹಿತಿ ನೀಡಿರುತ್ತಾರೆ. ಚಿಕ್ಕ ಓಬಯ್ಯ ಅವರ ನಾಲ್ಕು ಜನ ಹೆಣ್ಣು ಮಕ್ಕಳನ್ನು ಯಾವ ಕಾರಣಕ್ಕೋಸ್ಕರ ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದು ವಾದ ಪತ್ರದಲ್ಲಿ ಮಾಹಿತಿ ಇಲ್ಲ ಎಂದರೆ ಸರಿ. ವಾದ ಪತ್ರ ತಯಾರಿಸಲು ನಮ್ಮ ವಕೀಲರಿಗೆ ನಮ್ಮ ತಂದೆ ಮಾಹಿತಿ ನೀಡಿರುತ್ತಾರೆ, ನಾನು ಮಾಹಿತಿ ನೀಡಿರುವುದಿಲ್ಲ. ಆ ಕಾರಣದಿಂದ ವಾದಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಯಾವ ಆಧಾರದ ಮೇಲೆ ತಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನಮ್ಮ ತಂದೆ ಮಾಹಿತಿ ನೀಡಿರುತ್ತಾರೆ. ಪಿಳ್ಳಪ್ಪ ಅವರಿಗೆ ಒಬ್ಬ ಹೆಂಡತಿ, ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಈ ದಾವೆ ದಾಖಲಿಸುವಾಗ ಪಿಳ್ಳಪ್ಪ ಅವರ ಪತ್ನಿ ಚಿಕ್ಕ ಅಕ್ಕಯಮ್ಮ ಜೀವಂತವಾಗಿದ್ದರು. ಅವರಿಗೆ 3 ನೇ ಪ್ರತಿವಾದಿಯನ್ನೂ ಸೇರಿಸಿ ಒಟ್ಟು ನಾಲ್ಕು ಜನ ಮಕ್ಕಳು ಎಂದರೆ ಸರಿ. ಗಾಯತ್ರಿ ಮತ್ತು ಗಂಗರತ್ನಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಅವರಿಬ್ಬರನ್ನು ಈ ದಾವೆಯಲ್ಲಿ ಪಕ್ಷಕರರನ್ನಾಗಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಚಿಕ್ಕ ಓಬಯ್ಯ ಅವರ ನಾಲ್ಕು ಜನ ಹೆಣ್ಣು ಮಕ್ಕಳು ಮತ್ತು ಪಿಳ್ಳಪ್ಪ ಅವರ ಇಬ್ಬರು ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಲು ಏನು ತೊಂದರೆ ಎಂದು ಕೇಳಲು ಅವರು ದಾವೆಯಲ್ಲಿ ಸೇರಿಸಿದರೆ ನಮಗೆ ಬೈದು

ಬಿಡುತ್ತಾರೆ ಎಂದು ನುಡಿಯುತ್ತೇನೆ. 2 ನೇ ಪ್ರತಿವಾದಿ ಮತ್ತು ನಮ್ಮ ತಂದೆ ಚೆನ್ನಾಗಿದ್ದಾರೆ ಎಂದರೆ ಈ ದಾವೆ ದಾಖಲಿಸಿದಾಗಿನಿಂದ ಮಾತನಾಡುವುದಿಲ್ಲ ಎಂದು ನುಡಿಯುತ್ತೇನೆ. ಪಿಳ್ಳಪ್ಪ ಅವರ ಮಗಳು ಗಾಯತ್ರಿ ಅಸಲು ದಾವಾ ಸಂಖ್ಯೆ 1275/2023 ನ್ನು ದಾವಾ ಐಟಂ ಸಂಖ್ಯೆ 2 ಮತ್ತು 3 ಕ್ಕೆ ಸಂಬಂಧಿಸಿದಂತೆ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯ ಆದೇಶ ಪುಟಗಳು ಮತ್ತು ವಾದಪತ್ರದ ದೃಢೀಕೃತ ನಕಲುಗಳನ್ನು ಒಪ್ಪಿಕೊಂಡ ಮೇರೆಗೆ ಅಭಿಮುಖವಾಗಿ **ನಿ.ಡಿ.1 ಮತ್ತು ನಿ.ಡಿ.2** ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ ನಮ್ಮ ತಂದೆ ಮತ್ತು ಈ ದಾವೆಯ 2 ನೇ ಪ್ರತಿವಾದಿ ಒಬ್ಬರೇ ವಕೀಲರನ್ನು ನೇಮಕ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**3)** ನಮ್ಮ ತಾತ ಚಿಕ್ಕಓಬಯ್ಯ ಮರಣ ಹೊಂದಿ ಸುಮಾರು 20 ವರ್ಷ ಆಗಿರಬಹುದು. ಯಾವ ವರ್ಷ ಮರಣ ಹೊಂದಿದ್ದಾರೆ ಎಂದು ಗೊತ್ತಿಲ್ಲ. ದಾವಾ ಐಟಂ ಸಂಖ್ಯೆ 4 ನ್ನು ನಮ್ಮ ತಾತ ಮತ್ತು ಅವರ ನಾಲ್ಕು ಜನ ಮಕ್ಕಳು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಬಗ್ಗೆ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ತಾತನ ನಾಲ್ಕು ಜನ ಗಂಡಮಕ್ಕಳು ಸುಮಾರು 20 ವರ್ಷಗಳಿಂದ ಬೇರೆ ಬೇರೆಯಾಗಿ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದಾರೆ ಎಂದರೆ ಸರಿ. ನನಗೆ ಸುಮಾರು 44-45 ವರ್ಷ ವಯಸ್ಸು. ನಾನು 1978 ರಲ್ಲಿ ಜನಿಸಿರುತ್ತೇನೆ. ನಾನು ಜನಿಸಿದಾಗ ನಮ್ಮ ತಂದೆ ಮತ್ತು 2 ನೇ ಪ್ರತಿವಾದಿ ಒಂದೇ ಮನೆಯಲ್ಲಿ ವಾಸಿಸುತ್ತಿದ್ದರು. ಆ ಸಮಯದಲ್ಲಿ 1 ನೇ ಪ್ರತಿವಾದಿ ಮತ್ತು ಪಿಳ್ಳಪ್ಪ ಅವರು ಬೇರೆ ಬೇರೆ ಕಡೆ ವಾಸವಿದ್ದರು ಎಂದರೆ ಸರಿಯಲ್ಲ. ನಮ್ಮ ತಾತನ ಕಾಲದಲ್ಲಿ ದಾವಾ ಐಟಂ ಸಂಖ್ಯೆ 4 ನ್ನು ಉಳುಮೆ ಮಾಡುತ್ತಿರುವ ಬಗ್ಗೆ ದಾಖಲೆ ಇಲ್ಲ. ಅವರು ಸದರಿ ಜಮೀನನ್ನು ಮಂಜೂರು ಮಾಡುವಂತೆ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದರೋ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳಲ್ಲಿ ನಮ್ಮ ತಾತ ಅಥವಾ ನಮ್ಮ ತಂದೆ, ಪಿಳ್ಳಪ್ಪ, ನಾಗಪ್ಪ ರವರ ಹೆಸರು ನಮೂದು ಇಲ್ಲ ಎಂದರೆ ಸರಿ. ದಾವಾ ಐಟಂ ಸಂಖ್ಯೆ 4 ರ

ಪಕ್ಕದಲ್ಲಿ ನಾವು 1 ಎಕರೆ 30 ಗುಂಟೆಗೆ ಮೇಲ್ಪಟ್ಟು ಜಮೀನಿನಲ್ಲಿ ನೀಲಗಿರಿ ಮಕರಗಳನ್ನು ಹಾಕಿಕೊಂಡು ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸರಿಯಲ್ಲ. ದಾವಾ ಐಟಂ ಸಂಖ್ಯೆ4 ಲ್ಲಿ 1 ಮತ್ತು 4 ನೇ ಪ್ರತಿವಾದಿಗಳು 28 ಗುಂಟೆಯಲ್ಲಿ ಈ ವರ್ಷ ಸಹ ರಾಗಿ ಬೆಳೆ ಹಾಕಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕೇವಲ ಏಳೂವರೆ ಗುಂಟೆಯಲ್ಲಿ ಹಾಕಿದ್ದಾರೆ ಎಂದು ನುಡಿಯುತ್ತೇನೆ. ಸದರಿ ಜಮೀನಿನಲ್ಲಿ ತಲಾ ಏಳೂವರೆ ಗುಂಟೆ ಭಾಗ ಮಾಡಿಕೊಂಡು ಉಳುಮೆ ಮಾಡುತ್ತಿರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಸದರಿ ಸ್ವತ್ತಿನ 28 ಗುಂಟೆ ಜಮೀನಿನ ಖಾತೆ, ಕಂದಾಯ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ಚಿಕ್ಕ ಓಬಳಯ್ಯ ಅವರ ಮಗ 1 ನೇ ಪ್ರತಿವಾದಿ ಸದರಿ 28 ಗುಂಟೆ ಜಮೀನಿನಲ್ಲಿ ಸ್ವಾಧೀನವನ್ನು ಹೊಂದಿರುವುದರಿಂದ ಮಂಜೂರು ಮಾಡುವಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಒಟ್ಟು ಕುಟುಂಬದಲ್ಲಿ ಇದ್ದಾಗ ಅರ್ಜಿ ಸಲ್ಲಿಸಿದ್ದರು ಎಂದು ನುಡಿಯುತ್ತೇನೆ. ನಿ.ಪಿ.3 ರಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಒಟ್ಟು ಕುಟುಂಬದ ಪರವಾಗಿ ಅರ್ಜಿ ಸಲ್ಲಿಸಲಾಗಿದೆ ಎಂದು ನಮೂದು ಇಲ್ಲ. ಹಾಗೆ ಅರ್ಜಿ ಸಲ್ಲಿಸಿದ 81 ಜನರ ಪೈಕಿ 1 ನೇ ಪ್ರತಿವಾದಿ ಒಬ್ಬರು ಎಂದರೆ ಸರಿ. ದಿ.09-07-1996 ರಂದು ದೇವನಹಳ್ಳಿ ತಹಶೀಲ್ದಾರ್ ರವರು 1 ನೇ ಪ್ರತಿವಾದಿಗೆ 28 ಗುಂಟೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ಸದರಿ ಆದೇಶದ ಪ್ರಕಾರ ಕಂದಾಯ ದಾಖಲೆಗಳಲ್ಲಿ 1 ನೇ ಪ್ರತಿವಾದಿಯ ಹೆಸರನ್ನು ನಮೂದಿಸಲಾಯಿತು ಎಂದರೆ ಸರಿ. ನಮ್ಮ ತಂದೆ, ನಾಗಪ್ಪ ಅಥವಾ ಪಿಳ್ಳಪ್ಪ ಯಾವತ್ತೂ ಸಹ 1 ನೇ ಪ್ರತಿವಾದಿಯ ಜೊತೆ ತಮ್ಮನ್ನು ಸೇರಿಸುವಂತೆ ತಹಶೀಲ್ದಾರ್ ರವರಿಗೆ ಅರ್ಜಿ ಸಲ್ಲಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಅನಧಿಕೃತ ಸಾಗುವಳಿ ಮಾಡುತ್ತಿರುವುದರಿಂದ ಅವರಿಗೆ ಸದರಿ ಸ್ವತ್ತನ್ನು ಮಂಜೂರು ಮಾಡಲಾಯಿತು ಎಂದರೆ ನಾಲ್ಕೂ ಜನ ಸೇರಿ ಸಾಗುವಳಿ ಮಾಡುತ್ತಿದ್ದರು ಎಂದು ನುಡಿಯುತ್ತೇನೆ. ಆ ರೀತಿ ನಾಲ್ಕೂ ಜನರು ವ್ಯವಸಾಯ ಮಾಡುತ್ತಿದ್ದ ಬಗ್ಗೆ ದಾಖಲೆ ಇಲ್ಲ ಎಂದರೆ ಸರಿ. ನಿ.ಪಿ.3 ರಿಂದ ನಿ.ಪಿ.8 ರಲ್ಲಿ 1 ನೇ ಪ್ರತಿವಾದಿಯ ಹೊರತಾಗಿ ಬೇರೆಯವರ ಹೆಸರು ಇಲ್ಲ ಎಂದರೆ ಸರಿ.

**4)** ಚಿಕ್ಕಓಬಯ್ಯ ಅವರ ತಂದೆಯ ಹೆಸರು ಮುನಿಓಬಳಪ್ಪ. ದಾವಾ ಐಟಂ ಸಂಖ್ಯೆ 1 ನ್ನು ನಮ್ಮ ತಾತ ಚಿಕ್ಕ ಓಬಯ್ಯ ಅವರು ಖರೀದಿಸಿದ್ದರು ಎಂದರೆ ಸರಿ. ನಮ್ಮ ತಾತ ದಿ.25-10-1988 ರಂದು ಮರಣ ಹೊಂದಿರುತ್ತಾರೆ ಎಂದರೆ ನನಗೆ ದಿನಾಂಕ ಗೊತ್ತಿಲ್ಲ, ವಾದಪತ್ರದಲ್ಲಿ ನಮ್ಮ ತಂದೆ ಮಾಹಿತಿ ನೀಡಿರಬಹುದು ಎಂದು ನುಡಿಯುತ್ತೇನೆ. ನಿ.ಪಿ.9 ರ ಖಾತೆಯನ್ನು ಯಾರು ಮಾಡಿಸಿದರು ಎಂದು ನನಗೆ ಗೊತ್ತಿಲ್ಲ. ನಿ.ಪಿ.58 ನ್ನು ಯಾವ ಕಾರಣಕ್ಕೋಸ್ಕರ ಹಾಜರುಪಡಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರ ಪಿಳ್ಳಪ್ಪನಿಗೆ 2 ಎಕರೆ 20 ಗುಂಟೆ ಜಮೀನು ಬಂದಿದೆ ಎಂದು ಆತ ಮತ್ತು ಆತನ ಮಕ್ಕಳು 4 ನೇ ಪ್ರತಿವಾದಿಗೆ ಮಾಡಿರುವ ಕ್ರಯಪತ್ರ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ದಾಖಲಿಸಿದ ನಂತರ ಕೊರೊನಾ ಬರುವವರೆಗೆ ನಮ್ಮ ತಂದೆ ಈ ಪ್ರರಕರಣವನ್ನು ನೋಡಿಕೊಳ್ಳುತ್ತಿದ್ದರು, ಆನಂತರ ನಾನು ನೋಡಿಕೊಳ್ಳುತ್ತಿದ್ದೇನೆ. ಈ ದಾವೆ ದಾಖಲಿಸಿದ ನಂತರ ಪ್ರಕರಣದ ಎಲ್ಲಾ ವ್ಯವಹಾರಗಳನ್ನು ನಾನು ಸ್ವತಃ ನೋಡಿಕೊಳ್ಳುತ್ತಿದ್ದೇನೆ.

**(ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**